ವನ್ನೂ ಮಾಡಿದೆ. ಮತ್ತೆ ಇದು ರೋಗಗ್ರಸ್ಥ ಕಾರ್ಖಾನೆಗಳ ಸಾಲಿಗೆ ಸೇರಬಾರದು. ಅದನ್ನು ಸರಿಪಡಿಸುವುದಕ್ಕೋಸ್ಕರ, ಈಗಾಗಲೇ ಕೆಲವು ನಿಶ್ಚಿತವಾದಂಥ ಆರೋಪವನ್ನು ಒಬ್ಬರ ಮೇಲೆ ಒಬ್ಬರು ಮಾಡಿದ್ದಾರೆ. ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದು ಅನಾವಶ್ಯಕ. ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸೆಂಟರ್‌ನ ಜನರಲ್ ಮ್ಯಾನೇಜರ್ ಈಗ ಈಫ್ಯಾಕ್ಟರಿಯ ಇನ್‌ಚಾರ್ಜ್ ಆಗಿದ್ದಾರೆ. ಈ ಆರೋಪ, ಪ್ರತ್ಯಾರೋಪಗಳನ್ನು ಏನು ಮಾಡಿದ್ದಾರೆ, ಅದರ ಸತ್ಯಾಸತ್ಯತೆಗಳನ್ನು ಕಂಡುಹಿಡಿದ ಮೇಲೆ ನಾನು ಮಾತನಾಡುತ್ತೇನೆ.

ಶ್ರೀ ಜಿ. ರಾಜುಗೌಡ.— ಸ್ವಾಮಿ, ಮೂವರು ಅಧಿಕಾರಿಗಳನ್ನು ಅಮಾನತ್ತುಗೊಳಿಸುವ ವಿಷಯದಲ್ಲಿ ಮತ್ತು ಮತ್ತೆ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವ ವಿಷಯದಲ್ಲಿ ಎರಡು ಸಭೆಗಳಲ್ಲಿ. ಎರಡು ವಿಭಿನ್ನವಾದ ಅಭಿಪ್ರಾಯ ಸೂಚಿಸಿದ್ದಾರೆ, ಒಂದು ಸಾರಿ ಅಮಾನತ್ತು ಎಂದು ತೀರ್ಮಾನ ಮಾಡಿದ್ದಾರೆ, ಮತ್ತೊಂದು ಸಭೆಯಲ್ಲಿ ನಿರಪರಾಧಿಗಳು ಕೆಲಸಕ್ಕೆ ತೆಗೆದುಕೊಳ್ಳಿ ಎಂದು ಅಭಿಪ್ರಾಯ ಸೂಚಿಸಿದ್ದಾರೆ. ಈ ರೀತಿ ಮಾಡಿರುವುದಕ್ಕೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಜೆ. ಹೆಚ್. ಪಟೇಲ್.— ಅವರು ಸಮಯ, ಸಮಯಕ್ಕೊಂದು ತೀರ್ಮಾನ ತೆಗೆದು ಕೊಂಡಿದ್ದಾರೆ. ಏಕೆ ಈ ರೀತಿಯ ತೀರ್ಮಾನ ತೆಗೆದುಕೊಂಡಿದ್ದಾರೆ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ.

ಶ್ರೀ ವೇದಾಂತ ಹೆಮ್ಮಿಗೆ.— ಆರು ತಿಂಗಳಿಗೆ ಮುಂಚೆ ಒಂದು ತೀರ್ಮಾನವನ್ನು ಬದಲಾವಣೆ ಮಾಡುವ ಹಾಗಿಲ್ಲ. ಅವರು ಕಾನೂನು ಉಲ್ಲಂಘನೆ ಮಾಡಿದ್ದಾರೆ. ಸಂಬಂಧಿಸಿದ ಸಚಿವರು ಈ ಬಗ್ಗೆ ಗಮನಹರಿಸಬೇಕು.

ಶ್ರೀ ಜೆ. ಹೆಚ್. ಪಟೇಲ್.— ಇದನ್ನು ಕ್ರಮಬದ್ಧವಾಗಿ ಮಾಡಲಾಗುವುದು.

ನಿಯಮ ೬೩ರ ನಿಯಮದ ಮೇರೆಗೆ

i) ಚಿತ್ರದುರ್ಗ ಜಿಲ್ಲೆಯಲ್ಲಿ ಅಭಾವ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವುದು

ಶ್ರೀ ಜೆ. ಹೆಚ್. ಆಶ್ವತ್ಥರೆಡ್ಡಿ (ಜಗಳೂರು).— ಸನ್ಮಾನ್ಯ ಉಪಾಧ್ಯಕ್ಷರೇ, ಚಿತ್ರದುರ್ಗ ಜಿಲ್ಲೆಯಲ್ಲಿ ಆದರಲ್ಲೂ ವಿಶೇಷವಾಗಿ ಚಿತ್ರದುರ್ಗ, ಜಗಳೂರು, ಹಿರಿಯೂರು, ಚಳ್ಳಕೆರೆ, ಹೊಳಲ್ಕೆರೆ, ಮೊಳಕಾಲ್ಮೂರು ಹಾಗೂ ಹೊಸದುರ್ಗ ತಾಲ್ಲೂಕುಗಳಲ್ಲಿ ಅಭಾವ ಪರಿಹಾರ ಕಾರ್ಯಕ್ರಮದ ಮೇರೆಗೆ ಕಾಮಗಾರಿಕೆಗಳನ್ನು ಕೈಗೊಳ್ಳದಿರುವುದರಿಂದಾಗಿ ಕೃಷಿ ಕಾರ್ಮಿಕರಿಗೆ ಹಾಗೂ ಕೂಲಿಕಾರರಿಗೆ ಬಹಳ ತೊಂದರೆಯಾಗಿದ್ದು, ಕೂಡಲೇ ಅಭಾವ ಪರಿಹಾರ ಕಾಮಗಾರಿಕೆಗಳನ್ನು ಚಿತ್ರದುರ್ಗ ಜಿಲ್ಲೆಯಲ್ಲಿ ಕೈಗೊಂಡು, ಕೃಷಿ ಕಾರ್ಮಿಕರಿಗೆ ಕೆಲಸ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಂದಾಯ ಸಚಿವರ ಪರವಾಗಿ).— ಸನ್ಮಾನ್ಯ ಉಪಾಧ್ಯಕ್ಷರೇ, ೧೯೮೬-೮೭ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಯ ನಾಲ್ಕು ತಾಲ್ಲೂಕುಗಳಾದ ಚಿತ್ರದುರ್ಗ, ಹಿರಿಯೂರು, ದಾವಣಗೆರೆ ಜಗಳೂರುಗಳಲ್ಲಿನ ೧೯೭ ಹಳ್ಳಿಗಳನ್ನು ಬರಗಾಲ ಪೀಡಿತವಾಗಿದ್ದು, ಅವರಲ್ಲಿನ ೨೫೩,೪೪೨ ಜನರು ಹಾಗೂ ೯೭,೦೨೫ ಜಾನುವಾರಗಳು ಬರಗಾಲದ ಬವಣೆಗೆ ತುತ್ತಾಗಿರುವವರು. ಇದರಲ್ಲಿ ಕೃಷಿ ಕಾರ್ಮಿಕರು, ಕೂಲಿಕಾರರು ಅಲ್ಲದೇ ಸಣ್ಣ ಮಂತ್ತು ಅತಿ ಸಣ್ಣ ರೈತರು ಸೇರಿದ್ದಾರೆ. ಬರಪೀಡಿತ ಪ್ರದೇಶದ ಜನರಿಗೆ ಉದ್ಯೋಗ ಒದಗಿಸುವ ಸಲುವಾಗಿ ೫೪೫.೬೭ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡು ೨೬.೯೪ ಲಕ್ಷ ಮಾನವ ದಿನಗಳನ್ನು ಸೃಜಿಸಿದೆ. ಜಾನುವಾರುಗಳಿಗೆ ಮೇವು ಪೂರೈಕೆಗಾಗಿ ಜಿಲ್ಲೆಯಲ್ಲಿ ಆರು ಮೇವು ಬ್ಯಾಂಕುಗಳನ್ನು ಸ್ಥಾಪಿಸಲಾಗಿದೆ. ಇದಲ್ಲದೇ ಇತರೇ ಇಲಾಖಾ ಯೋಜನಾ ಕಾರ್ಯಕ್ರಮಗಳಡಿಯಲ್ಲಿ ಮೊರೆಯಾವ ಹಣವನ್ನು ಉಪಯೋಗಿಸಿಕೊಂಡು ಪರಿಹಾರ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂತೆ ಈಗಾಗಲೇ ಆದೇಶಗಳನ್ನು ಹೊರಡಿಸಲಾಗಿದೆ.

ಚಿತ್ರದುರ್ಗ ಜಿಲ್ಲೆಯ ಬರಪರಿಹಾರ ಕಾರ್ಯಕ್ರಮಗಳಿಗೆ ಈ ಕೆಳಕಂಡಂತೆ ಹಣ ಬಿಡುಗಡೆಯಾಗಿದೆ.

ಲಕ್ಷ ರೂ.ಗಳಲ್ಲಿ

ಎನ್‌ಆರ್‌ಇಪಿ ಬರ ಪರಿಹಾರ	ಆರ್‌ಎಲ್‌ಇಜಿಪಿ ರೆಗ್ಯೂಲರ್	ಸೊಸ ಕಾವಂಗಾರಿ	ಕುಡಿಯುವ ನೀರಿನ ಯೋಜನೆಗಾಗಿ ಮುಂಖ್ಯಮಂತ್ರಿ ಯವರ ನಿಧಿಯಿಂದ	ಡಿ.ಪಿ.ಎ.ಪಿ.	ಇತರ ಇಲಾಖಾ ವತಿಯಿಂದ
೧೨೧.೭೭	೭೫.೦೬	೬೫.೬೬	೫.೧೫	೧೧.೧೬	೬೨.೧೯	೨೯೭.೧೯

ಜಿಲ್ಲಾಧಿಕಾರಿಯವರಿಗೆ ಅವಶ್ಯವಿರುವ ಪ್ರದೇಶಗಳಲ್ಲಿ ಉದ್ಯೋಗ ಅವಶ್ಯವಿರುವವರಿಗೆ ಉದ್ಯೋಗ ನೀಡುವುದು ಸೇರಿದಂತೆ, ಎಲ್ಲಾ ಅಭಾವ ಪರಿಹಾರ ಕಾರ್ಯಕ್ರಮಗಳನ್ನು ಪರಿಸ್ಥಿತಿ ಉತ್ತಮಗೊಳ್ಳುವವರೆಗೆ ಮುಂದುವರಿಸಿಕೊಂಡು ಬರಲು ಆದೇಶಿಸಲಾಗಿದೆ.

ಉಪಾಧ್ಯಕ್ಷರು.— ಶ್ರೀ ಜಿ. ನಾರಾಯಣಸ್ವಾಮಿ – ಅಬ್ಸೆಂಟ್.

ii) ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಯ ಮೀನುಗಾರರಿಗೆ ಡೀಸಲ್ ಸಬ್ಸಿಡಿ ಕೊಡಿಸುವುದು

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಸನ್ಮಾನ್ಯ ಉಪಾಧ್ಯಕ್ಷರೇ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯ ಯಾಂತ್ರಿಕ ದೋಣಿ ಮೀನುಗಾರರಿಗೆ ಸರ್ಕಾರವು ೧೯೮೬ರಲ್ಲಿ ಡೀಸಲ್ ಮೇಲೆ ಸಬ್ಸಿಡಿಯನ್ನು ಕೊಡಮಾಡಿದೆ. ಈ ವರ್ಷ ಮೀನಿನ ಕ್ಷಾಮದಿಂದಾಗಿ, ಬಹಳ ಕಡಿಮೆ ಮೀನನ್ನು ದೊರೆಯುತ್ತಿರುವುದರಿಂದ, ಮೀನುಗಾರರು ತುಂಬಾ ಕಷ್ಟ ನಷ್ಟಕ್ಕೆ ಒಳಗಾಗಿರುತ್ತಾರೆ. ಆದ ಕಾರಣ ೧೯೮೭ರಲ್ಲಿ ಕೂಡ ಕಳೆದ ವರ್ಷದಂತೆ ಯಾಂತ್ರಿಕ ಮೀನುಗಾರರಿಗೆ ಡೀಸಲ್ ಸಬ್ಸಿಡಿ ಕೊಡಿಸಬೇಕು. ಅವರ ಕಷ್ಟವನ್ನು ಪರಿಹರಿಸಲು ಮುಂದಾಗಬೇಕು. ಈ ಕಾರಿತು ಮೀನುಗಾರಿಕಾ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಪಶುಸಂಗೋಪನೆ, ಮೀನುಗಾರಿಕೆ ಮತ್ತು ರೇಷ್ಮೆ ಸಚಿವರು).— ಸನ್ಮಾನ್ಯ ಉಪಾಧ್ಯಕ್ಷರೇ, ಮೀನುಗಾರಿಕೆ ಯಾಂತ್ರಿಕ ದೋಣಿಗಳಿಗೆ ಡೀಸಲ್ ಸಬ್ಸಿಡಿ ನೀಡುವ ಯೋಜನೆಯು ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ೧೯೮೫-೮೬ರಿಂದ ಜಾರಿಯಲ್ಲಿದ್ದು, ಆದರೆ ೧೯೮೪-೮೫ರಿಂದಲೇ ಅನ್ವಯವಾಗಿರುತ್ತದೆ. ಮೀನುಗಾರರು ಡೀಸಲ್ ಮೇಲೆ ನೀಡುವ ಮಾರಾಟ ತೆರಿಗೆಗೆ ಸಮನಾಗಿ ಈ ಸಬ್ಸಿಡಿಯನ್ನು ನೀಡಲಾಗುತ್ತಿದೆ. ಈ ಯೋಜನೆಯಂ ೧೯೮೬-೮೭ರಲ್ಲಿ ಕೂಡ ಕಾರ್ಯಗತವಾಗುತ್ತಿದ್ದು ಒಂದು ಕೋಟಿಯಷ್ಟು ಬಜೆಟ್ ಅವಕಾಶವಿರುತ್ತದೆ. ಹಾಗೂ ೧೯೮೭-೮೮ರಲ್ಲಿ ಕೂಡ ಒಂದು ಕೋಟಿಯಷ್ಟು ಬಜೆಟ್ ಅವಕಾಶವನ್ನು ಕಲ್ಪಿಸಲಾಗಿದೆ. ಇದುವರೆವಿಗೂ ಮಂಜೂರಾತಿ ಮಾಡಿ ಬಿಡುಗಡೆ ಮಾಡಿರುವ ಬಗ್ಗೆ ಕೆಲವು ವಿವರಗಳನ್ನು ಕೊಡಲು ಇಚ್ಛೆಪಡುತ್ತೇನೆ.

ಯೋಜನೆಯ ಮೊದಲ ವರ್ಷವಾದ ೧೯೮೫-೮೬ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ೨೭.೩೭ ಲಕ್ಷ ರೂಪಾಯಿಗಳಷ್ಟು ಮತ್ತು ಉತ್ತರ ಕನ್ನಡ ಜಿಲ್ಲೆಗೆ ೧೧.೯೭ ಲಕ್ಷಗಳಷ್ಟು ಮಂಜೂರಾತಿಯಾಗಿದೆ. ಪ್ರಸಕ್ತ ಸಾಲಿನಲ್ಲಿ ಅಂದರೆ ೧೯೮೬-೮೭ರಲ್ಲಿ ೧೩.೯೯ ಲಕ್ಷ ರೂಪಾಯಿಗಳ ದಕ್ಷಿಣ ಕನ್ನಡ ಜಿಲ್ಲೆಗೆ ಹಾಗೂ ೧.೪೬ ಲಕ್ಷ ರೂಪಾಯಿಗಳು ಉತ್ತರ ಕನ್ನಡ ಜಿಲ್ಲೆಗೆ ಇದುವರೆಗೆ ಮಂಜೂರಾತಿ ನೀಡಲಾಗಿದೆ. ಈ ಯೋಜನೆಯ ಲಾಭವನ್ನು ಹೆಚ್ಚಿನ ಸಂಖ್ಯೆಯಲ್ಲಿ ಮೀನುಗಾರರು ಪಡೆಯುವ ದೃಷ್ಟಿಯಿಂದ ಕಳೆದ ಸಾಲಿನಲ್ಲಿ ಮೀನುಗಾರರು ಸಹಕಾರ ಸಂಘಗಳ ಮೂಲಾಂತರವಾಗಲೀ, ಅಥವಾ ಕರ್ನಾಟಕ